ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

೧೯೮೬-೮೭ನೇ ಸಾಲಿನಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಿಗಧಿಪಡಿಸಿದ ಒಟ್ಟು ಅನುದಾನದ ವಿವರ ಈ ಕೆಳಕಂಡಂತಿದೆ :—

ಅಭಿವೃದ್ಧಿ ಅನುದಾನ	—	ರೂ. ೧,೨೮,೫೫,೦೦೦.೦೦
ಬ್ಲಾಕ್ ಅನುದಾನ	—	ರೂ. ೧,೪೨,೦೦,೦೦೦.೦೦

ಗ್ರಾಮಾಂತರ ಪ್ರದೇಶದಲ್ಲಿ ನೀರಾವರಿ ಕೊಳಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೧೫೨೨ (೪೯೨) ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗ್ರಾಮಾಂತರ ಪ್ರದೇಶದಲ್ಲಿನ ನೀರಾವರಿ ಕೊಳಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಕೇಂದ್ರದ ಇಲ್ಲವೇ ರಾಜ್ಯದ ಯೋಜನೆ ಏನಾದರೂ ಇದೆಯೇ?

(ಆ) ಹಾಗಿದ್ದಲ್ಲಿ, ಈ ಯೋಜನೆಯು ರೂಪರೇಶೆಗಳೇನು?

(ಇ) ರಾಜ್ಯದಲ್ಲಿ ಈ ಯೋಜನೆಯಡಿಯಲ್ಲಿ ಎಷ್ಟು ನೀರಾವರಿ ಕೊಳಗಳು ನಿರ್ಮಿಸಲಾಗಿವೆ, ಇಲ್ಲವೇ ಯೋಜಿಸಲಾಗಿದೆ?

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸಣ್ಣ ನೀರಾವರಿ ಯೋಜನೇತರ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಅಡಿಯಲ್ಲಿ ಗ್ರಾಮಾಂತರ ಪ್ರದೇಶದ ನೀರಾವರಿ ಕೆರೆಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮ ಇದೆ.

ಆ) ಈ ಯೋಜನೆಗಳ ಅಡಿಯಲ್ಲಿ ಅಸ್ತಿತ್ವದಲ್ಲಿರುವ ನೀರಾವರಿ ಕೆರೆಗಳ ಏರಿಯ ಬಲಪಡಿಸುವಿಕೆ, ಕಾಲುವೆಗಳಿಗೆ ಲೈನಿಂಗ್ ಮಾಡುವುದು, ಕಾಲುವೆಗಳ ಹೂಳು ತೆಗೆಯುವುದು, ತೂಬು ಮತ್ತು ಕೋಡಿಗಳ ದುರಸ್ತಿ ಕಾರ್ಯ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಇ) ಈ ಯೋಜನೆ ಅಸ್ತಿತ್ವದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಇರುವುದರಿಂದ ಹೊಸ ನೀರಾವರಿ ಕೆರೆಗಳನ್ನು ನಿರ್ಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಡೂರು ಕ್ಷೇತ್ರದಲ್ಲಿ ಕೆರೆಗಳ ನಿರ್ಮಾಣದ ಬಗ್ಗೆ

೧೫೩೩ (೩೪೮) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಬೇಕೆಂದಿರುವ ಹೊಸ ಕೆರೆಗಳು ಯಾವುವು, ಅವುಗಳ ಅಂದಾಜು ವೆಚ್ಚವೆಷ್ಟು?

ಆ) ಎಷ್ಟು ಅವಧಿಯಲ್ಲಿ ಅಂತಹ ಕೆರೆಗಳನ್ನು ನಿರ್ಮಾಣ ಮಾಡಲಾಗುವುದು?

ಇ) ಈ ಎಲ್ಲಾ ಕೆರೆಗಳಿಂದ ನೀರಾವರಿಯಾಗುವ ಅಚ್ಚುಕಟ್ಟು ಪ್ರದೇಶವೆಷ್ಟು (ಎಕರೆಗಳಲ್ಲಿ).

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೬-೮೭ ರಲ್ಲಿ ನಿರ್ಮಿಸಬೇಕೆಂದಿರುವ ಹೊಸಕೆರೆಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಸುಮಾರು ೩-೪ ವರ್ಷಗಳು.

ಇ) ೨೦೫೭ ಎಕರೆಗಳು.